**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 534/2019
ಪಿಡಬ್ಲು :4 ಸಿಡಬ್ಲು :3

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ವಿನಾಯಕ ಬಡೊದೆ |
| ತಂದೆಯ ಹೆಸರು | : ಶ್ರೀ. ಪಾಂಡು |
| ವಯಸ್ಸು | : 35 ವರ್ಷ |
| ಉದ್ಯೋಗ | : ವಕ್ಕಲುತನ |
| ವಾಸ್ತವ್ಯ | : ಹುಬ್ಬರವಾಡಿ, ತಾಲೂಕುಃ ರಾಯಬಾಗ |
| ದಿನಾಂಕ | : 09-07-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾ-2 ಫ್ರಾಸಾ-2 ರವರ ಪರಿಚಯ ಇರುತ್ತದೆ. ಚಾಸಾ-1 ಮಲ್ಲವ ಮತ್ತು ಅವರ ಗಂಡ ಚಾಸಾ-8 ಮುತ್ತೆಪ್ಪ ಭಜಂತ್ರಿ ನನಗೆ ಗೊತ್ತಿರುವುದಿಲ್ಲ.

2. ಈಗ 8-9 ವರ್ಷಗಳ ಹಿಂದೆ ರಾಯಬಾಗ ಪೋಲಿಸರು ನನ್ನನ್ನು ಪೋಲಿಸ ಠಾಣೆಗೆ ಕರೆಸಿ ನನ್ನ ಸಹಿ ಮಾಡಿಸಿಕೊಂಡರು. ಯಾವ ವಿಚಾರವಾಗಿ ಸಹಿ ಮಾಡಿಸಿಕೊಂಡರು ಎಂದು ಹೇಳಿರುವುದಿಲ್ಲ. ನಿಪಿ-3 ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 [ಬಿ] ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮ ಯಾವುದೆ ಮಸ್ತುವನ್ನು ಜಪ್ತು ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

2. ಸಾಕ್ಷಿಗೆ ಎರಡು ಪೋಟೊಗಳನ್ನು ತೋರಿಸಿದ್ದು ಅದರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿದ್ದಾರೆ. ಅದನ್ನು ಹುಬ್ಬರವಾಡಿಯಲ್ಲಿ ತೆಗೆಯಲಾಗಿದೆ ಎಂದು ಹೇಳಿದ್ದಾರೆ. ಅಲ್ಲಿ ಯಾವ ಕಾರಣಕ್ಕೆ ಪೋಟೊ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನನ್ನು ಚಾಸಾ–1 ರವರ ಮನೆಯ ಹತ್ತಿರ ಕರೆಸಿದ್ದರಿಂದ ನಾನು ಅಲ್ಲಿಗೆ ಹೋಗಿದ್ದೇನು ಎನ್ನುವುದು ಸರಿಯಲ್ಲ. ನಾನು ಈಗ ತೋರಿಸಿದ ಪೋಟೊದಲ್ಲಿ ದೂರುದಾರರು ಹಾಜರಿದ್ದು, ಅವರ ಮೇಲೆ ಆರೋಪಿತರು ಹಲ್ಲೆ ಮಾಡಿದರು ಎಂದು ಮಲ್ಲವ್ವ ಅವರು ಸ್ಥಳವನ್ನು ಪೋಲಿಸರಿಗೆ ತೋರಿಸಿದರು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಮಲ್ಲವ್ವ ಮತ್ತು ಅವರ ಗಂಡನಿಗೆ ಹಲ್ಲೆ ಮಾಡಲು ಆರೋಪಿತರು ಉಪಯೋಗಿಸಿದ ರಕ್ತ ಹತ್ತಿದ ಕಲ್ಲನ್ನು ಜಪ್ತು ಮಾಡಿಕೊಂಡರು ಎನ್ನುವುದು ಸರಿಯಲ್ಲ. ಪೋಲಿಸರು ಸ್ಥಳದಲ್ಲಿ ನಿಪಿ–3 ರಂತೆ ಪಂಚನಾಮೆ ಮಾಡಿ ನಿಪಿ–3(ಬಿ) ಪ್ರಕಾರ ನನ್ನ ಸಹಿ ಮಾಡಿಸಿಕೊಂಡರು ಎನ್ನುವುದು ಸರಿಯಲ್ಲ. ಆ ರೀತಿ ಪಂಚನಾಮೆ ಮಾಡಲು ಸಮಯದಲ್ಲಿ ಈಗ ನಾನು ಗುರುತಿಸಿದ ಎರಡು ಪೋಟೊಗಳನ್ನು ತೆಗೆಯಲಾಗಿದೆ ಎನ್ನುವುದು ಸರಿಯಲ್ಲ. ನಾನು ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃಶ್ರೀ.ಬಿ.ಜೆ.ಜೆ ವಕೀಲರಿಂದ ಆರೋಪಿತರ ಪರ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.